**ಮೂ.ದಾ.ನಂ. 48/2016**

ಪಿ.ಡಬ್ಲ್ಯು.1

(ಇಂದು ದಿನಾಂಕ: **04-11-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ನಿ.ಡಿ.1 ನ್ನು 1 ಹಾಗೂ 2ನೇ ಪ್ರತಿವಾದಿಯರು ನನಗೆ ನೀಡಿರುತ್ತಾರೆ. ಸದ್ರಿ ನಿ.ಡಿ.1 ನ್ನು ವಾದಿಯು ದಾವೆಯನ್ನು ದಾಖಲಿಸಿದ ನಂತರದಲ್ಲಿ ನಾನು ಪಡೆದುಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಾನು 1 ಹಾಗೂ 2ನೇ ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇನೆ. 2ನೇ ಪ್ರತಿವಾದಿಗೆ ಅವರ ಸಹೋದರಿಯರು ನೀಡಿದ ಜಿ.ಪಿ.ಎ. ನಿ.ಡಿ.1 ಆಗಿರುತ್ತದೆ ಎಂದರೆ ಸರಿ. 2ನೇ ಪ್ರತಿವಾದಿಯ ಸಹೋದರಿಯರು 1ನೇ ಪ್ರತಿವಾದಿಗೆ ಯಾವುದೇ ಜಿ.ಪಿ.ಎ. ಯನ್ನು ನೀಡಲಿಲ್ಲ ಎಂದರೆ ಸರಿ. ನಿಡಿ 1 ನ್ನು 2013 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ 1 ನ್ನು 2 ನೇ ಪ್ರತಿವಾದಿಯ ಸಹೋದರಿಯರು ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. 1 ಹಾಗೂ 2ನೇ ಪ್ರತಿವಾದಿಯ ಸರ್ವೆ ನಂಬರ 315 ಹಿಸ್ಸಾ 2 ಹಾಗೂ ಸರ್ವೆ ನಂಬರ 313 ಹಿಸ್ಸಾ 4 ಹಾಗೂ ಸರ್ವೆ ನಂಬರ 314 ಹಿಸ್ಸಾ 5 ಸ್ಥಳಗಳಿಗೆ ಸಂಬಂಧಿಸಿದಂತ ನಿಡಿ1 ನ್ನು ನೀಡಿರುತ್ತಾರೆ. ನಿ.ಡಿ.1 ನ್ನು 2ನೇ ಪ್ರತಿವಾದಿಯ ಸಹೋದರಿಯರು 2ನೇ ಪ್ರತಿವಾದಿಗೆ ನೀಡಿರುವ ಕುರಿತು ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ನನಗೆ ತಿಳಿದಿರುವುದಿಲ್ಲ.

ನಿ.ಡಿ.1 ನ್ನು ನನಗೆ 1 ನೇ ಪ್ರತಿವಾದಿಯು ಈ ದಾವೆ ದಾಖಲಾದ ನಂತರದಲ್ಲಿ ನನಗೆ ನೀಡಿರುತ್ತಾರೆ. ನಿ.ಡಿ.1 ರಲ್ಲಿ ಕಾಣಿಸಿದ ಸರ್ವೆ ನಂಬರಗಳನ್ನು 1ನೇ ಪ್ರತಿವಾದಿಯು ಪ್ರಸ್ತುತ ನೋಡಿಕೊಳ್ಳುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯು ಚಂದಾವರದಲ್ಲಿ ದೇವಸ್ಥಾನ ಮಾಡಿಕೊಂಡಿದ್ದಾರೆ

ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರ ಮನೆಯಲ್ಲಿ ಕಾರ್ಯಕ್ರಮ ಇದ್ದಂತಹ ಸಂದರ್ಭದಲ್ಲಿ ಬಂದು ಹೋಗಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಡಿ1 ಕ್ಕೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬರುವುದಿಲ್ಲ. ಸಾಕ್ಷಿ ಮುಂದುವರಿದು ಅವರ ಪರವಾಗಿ ನಾನೇ ಸಾಕ್ಷಿ ನುಡಿಯುತ್ತೇನೆ ಎಂದು ನುಡಿಯುತ್ತಾರೆ. 1 ಹಾಗೂ 2ನೇ ಪ್ರತಿವಾದಿಯರು ಈ ದಾವೆಯಲ್ಲಿ ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಲಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ